<u>ಕರ್ನಾಟಕ ಸರ್ಕಾರ</u>

**ಆಯುಕ್ತರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

<u>**ತಾಂತ್ರಿಕ ಶಿಕ್ಷಣ ಇಲಾಖೆಯ ನಡವಳಿಗಳು**</u>

ವಿಷಯ ತಾಂತ್ರಿಕ ಶಿಕ್ಷಣ ಇಲಾಖೆಯ ಉಳಿದ ಮೂಲ ವೃಂದದಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರ ಮುಂಬಡ್ತಿ ಹುದ್ದೆಗಳನ್ನು ಹಿರಿಯ ದತ್ತಾಂಶ ನಮೂದು ಸಹಾಯಕ / ದತ್ತಾಂಶ ನಮೂದು ಸಹಾಯಕ ವೃಂದದಿಂದ ಭರ್ತಿ ಮಾಡುವ ಕುರಿತು.

ಉಲ್ಲೇಖ
1. ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ: DTE-ADMIOEST(4)/12/2022 ದಿನಾಂಕ: 20.04.2022 ರಲ್ಲಿ ಪ್ರಕಟಿಸಲಾಗಿರುವ ಹಿರಿಯ ದತ್ತಾಂಶ ನಮೂದು ಸಹಾಯಕ ವೃಂದದ ಹಾಗೂ ಸಂಖ್ಯೆ: DTE-ADMIOEST(4)/4/2023, ದಿನಾಂಕ: 26.09.2023 ರಲ್ಲಿ ಪ್ರಕಟಿಸಲಾಗಿರುವ ದತ್ತಾಂಶ ನಮೂದು ಸಹಾಯಕ ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿ.
2. ದಿನಾಂಕ: 13.03.2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳ ಮೇರೆಗೆ
3. ಈ ಕಛೇರಿ ಜ್ಞಾಪನ ಸಂಖ್ಯೆ: DTE-ADMIOEST(4)/12/2024, ದಿ: 13.03.2024.

*****

<u>ಪ್ರಸ್ತಾವನೆ:-</u>

ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಶೀಘ್ರಲಿಪಿಗಾರರ ಹುದ್ದೆಯನ್ನು ಶೇ. 50 ರಷ್ಟು ನೇರ ನೇಮಕಾತಿ ಮೂಲಕ ಮತ್ತು ಶೇ. 50 ರಷ್ಟು ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಿ, ಮುಂಬಡ್ತಿ ಹುದ್ದೆಗಳನ್ನು ಹಿರಿಯ ದತ್ತಾಂಶ ನಮೂದು ಸಹಾಯಕ ವೃಂದದಿಂದ ವರ್ಗಾವಣೆ ಮೂಲಕ ಭರ್ತಿ ಮಾಡಲು ಹಾಗೂ ಅರ್ಹ ಅಭ್ಯರ್ಥಿಗಳು ಇಲ್ಲವಾದಲ್ಲಿ ದತ್ತಾಂಶ ನಮೂದು ಸಹಾಯಕ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ(1) ರಂತೆ ಪ್ರಕಟಿಸಲಾಗಿರುವ ತಾಂತ್ರಿಕ ಶಿಕ್ಷಣ ಇಲಾಖೆಯ ಹಿರಿಯ ದತ್ತಾಂಶ ನಮೂದು ಸಹಾಯಕ / ದತ್ತಾಂಶ ನಮೂದು ಸಹಾಯಕ ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯ ಅನುಸಾರ ಖಾಲಿಯಿರುವ ಶೀಘ್ರಲಿಪಿಗಾರರ ಮುಂಬಡ್ತಿ ಹುದ್ದೆಗಳನ್ನು ತುಂಬಬೇಕಾಗಿರುತ್ತದೆ. ಈ ಸಂಬಂಧ ಉಲ್ಲೇಖ(2) ರಂತೆ ದಿನಾಂಕ: 13.03.2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರ ಮುಂಬಡ್ತಿ ಹುದ್ದೆಗಳನ್ನು ಜೇಷ್ಠತೆ, ಅರ್ಹತೆ, ಮೀಸಲಾತಿ ನಿಯಮಗಳನ್ವಯ ಅರ್ಹ ಹಿರಿಯ ದತ್ತಾಂಶ ನಮೂದು ಸಹಾಯಕರನ್ನು ವರ್ಗಾವಣೆ ಮೂಲಕ ಭರ್ತಿ ಮಾಡಲು ಹಾಗೂ ಅರ್ಹ ದತ್ತಾಂಶ ನಮೂದು ಸಹಾಯಕರನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ನೀಡಲು ತೀರ್ಮಾನಿಸಿ, ಸದರಿ ಅರ್ಹ ಸಿಬ್ಬಂದಿಗಳನ್ನು ಶೀಘ್ರಲಿಪಿಗಾರರ ಮುಂಬಡ್ತಿ ಹುದ್ದೆಗೆ ಪರಿಗಣಿಸಲು ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ ಶಿಫಾರಸ್ಸು ಮಾಡಲಾಗಿರುತ್ತದೆ.

ಉಲ್ಲೇಖ(3) ರಲ್ಲಿ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ ಹಾಗೂ ಶಿಫಾರಸ್ಸಿನಂತೆ ಹಿರಿಯ ದತ್ತಾಂಶ ನಮೂದು ಸಹಾಯಕ / ದತ್ತಾಂಶ ನಮೂದು ಸಹಾಯಕರಿಗೆ ಶೀಘ್ರಲಿಪಿಗಾರರ ಮುಂಬಡ್ತಿ ಹುದ್ದೆಗೆ ಕೌನ್ಸಲಿಂಗ್ ಮುಖಾಂತರ ಸ್ಥಳನಿಯುಕ್ತಿಗೊಳಿಸಲು ದಿನಾಂಕ: 14.03.2024 ರಂದು ನಡೆದ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಮುಂಬಡ್ತಿ ಹುದ್ದೆಗೆ ಅರ್ಹರಿರುವ ಎಲ್ಲಾ ಹಿರಿಯ ದತ್ತಾಂಶ ನಮೂದು ಸಹಾಯಕ / ದತ್ತಾಂಶ ನಮೂದು ಸಹಾಯಕರುಗಳು ದಿನಾಂಕ: 14.03.2024 ರಂದು ನಡೆದ ಶೀಘ್ರಲಿಪಿಗಾರರ ಮುಂಬಡ್ತಿ ಹುದ್ದೆಯ ಸ್ಥಳನಿಯುಕ್ತಿ ಕೌನ್ಸಲಿಂಗ್‌ನಲ್ಲಿ ಹಾಜರಾಗಿ ಸ್ಥಳವನ್ನು ಆಯ್ಕೆ

ಮಾಡಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಅರ್ಹ ಸಿಬ್ಬಂದಿಗಳಿಗೆ ಶೀಘ್ರಲಿಪಿಗಾರರ ಮುಂಬಡ್ತಿ ಹುದ್ದೆಗೆ ವರ್ಗಾವಣೆ / ಮುಂಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: DTE-ADMIOEST(4)/13/2024** /1534 **ದಿನಾಂಕ: 14.03.2024**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಹಿರಿಯ ದತ್ತಾಂಶ ನಮೂದು ಸಹಾಯಕ / ದತ್ತಾಂಶ ನಮೂದು ಸಹಾಯಕರುಗಳಿಗೆ ಗ್ರೂಪ್-ಸಿ ವೃಂದದ ರಾಜ್ಯ ವೇತನ ಶ್ರೇಣಿ ರೂ. 27650-650-29600-750-32600-850-36000-950-39800-1100-46400-1250-52650 ರಲ್ಲಿನ ಶೀಘ್ರಲಿಪಿಗಾರರ ಹುದ್ದೆಗೆ ವರ್ಗಾವಣೆ / ಮುಂಬಡ್ತಿ ನೀಡಿ ಮುಂದಿನ ಆದೇಶದವರೆಗೆ ಅವರ ಹೆಸರಿನ ಮುಂದೆ ಸೂಚಿಸಿರುವ ಖಾಲಿ ಹುದ್ದೆಗೆ ಎದುರಾಗಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ. ಸಂ. | ಹಿರಿಯ ದತ್ತಾಂಶ ನಮೂದು ಸಹಾಯಕ / ದತ್ತಾಂಶ ನಮೂದು ಸಹಾಯಕರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು | ಪದನಾಮ | ಶೀಘ್ರಲಿಪಿಗಾರರ ಹುದ್ದೆಗೆ ವರ್ಗಾವಣೆ / ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಲಾದ ಸಂಸ್ಥೆ |
|---|---|---|---|
| 1. | ಸವಿತಾ ಬೆಟಗೇರಿ<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ | ಹಿರಿಯ ದತ್ತಾಂಶ ನಮೂದು ಸಹಾಯಕ | ಸರ್ಕಾರಿ ಪಾಲಿಟೆಕ್ನಿಕ್, ಸೊರಬ |
| 2. | ರೇಖಾ ಡಿ.ಆರ್.<br>ಸರ್ಕಾರಿ ಸಿ.ಪಿ.ಸಿ. ಪಾಲಿಟೆಕ್ನಿಕ್, ಮೈಸೂರು | ಹಿರಿಯ ದತ್ತಾಂಶ ನಮೂದು ಸಹಾಯಕ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ |
| 3. | ಬಿಂದು ಡಿ.<br>ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ | ದತ್ತಾಂಶ ನಮೂದು ಸಹಾಯಕ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ |
| 4. | ಭಾಗ್ಯ ಡಿ.ಕೆ.<br>ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಭದ್ರಾವತಿ | ದತ್ತಾಂಶ ನಮೂದು ಸಹಾಯಕ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ |
| 5. | ಅಶ್ವಿನಿ ಹಂಚಿನಮನಿ ಎಂ.<br>ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ | ದತ್ತಾಂಶ ನಮೂದು ಸಹಾಯಕ | ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು |

ಶೀಘ್ರಲಿಪಿಗಾರರ ಮುಂಬಡ್ತಿ ಹುದ್ದೆಗೆ ವರ್ಗಾವಣೆ / ಮುಂಬಡ್ತಿ ಹೊಂದಿರುವ ಹಿರಿಯ ದತ್ತಾಂಶ ನಮೂದು ಸಹಾಯಕ / ದತ್ತಾಂಶ ನಮೂದು ಸಹಾಯಕರು ಆದೇಶದ ಪ್ರತಿಯನ್ನು ಇಲಾಖಾ ವೆಬ್‌ಸೈಟ್‌ನಿಂದ ಪಡೆದು ಸ್ಥಳನಿಯುಕ್ತಿಗೊಳಿಸಲಾದ ಸಂಸ್ಥೆಯಲ್ಲಿ ಈ ಆದೇಶ ತಲುಪಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಬಡ್ತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ. ಬಡ್ತಿ ಹೊಂದಿರುವ ಹಿರಿಯ ದತ್ತಾಂಶ ನಮೂದು ಸಹಾಯಕ / ದತ್ತಾಂಶ ನಮೂದು ಸಹಾಯಕರ ಪೈಕಿ ಯಾರಾದರೂ ಪ್ರಸ್ತುತ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ನಿಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಆಯುಕ್ತರು,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

1. ಸಂಬಂಧಪಟ್ಟ ಹಿರಿಯ ದತ್ತಾಂಶ ನಮೂದು ಸಹಾಯಕ / ದತ್ತಾಂಶ ನಮೂದು ಸಹಾಯಕರುಗಳಿಗೆ (ಸಂಬಂಧಿಸಿದ ಪ್ರಾಂಶುಪಾಲರ ಮೂಲಕ);

2. ಸಂಬಂಧಪಟ್ಟ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಪಾಲಿಟೆಕ್ನಿಕ್ / ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ;
3. ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ;
4. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು).

ಪ್ರತಿ:-

1. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಶಾಖಾ ರಕ್ಷಾ ಕಡತ.